# ರಾಮಕೃಷ್ಣ ಸುದ್ದಿ ಸಂಚಯ

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com Email : ho@ramakrishnacredit.com

ಸಂಪುಟ : IX ಸಂಚಿಕೆ : 2 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಜುಲೈ-ಸಪ್ಟೆಂಬರ್-2024


## ಅಧ್ಯಕ್ಷರ ಮಾತು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

### ಅರ್ಧ ವರ್ಷಾಂತ್ಯ 30.09.2024ಕ್ಕೆ ಉತ್ತಮ ಪ್ರಗತಿ

ದಿನಾಂಕ 30.09.2024ಕ್ಕೆ ರೂ.548 ಕೋಟಿ ಠೇವಣಿ, ರೂ.481 ಕೋಟಿ ಸಾಲದೊಂದಿಗೆ ಒಟ್ಟು ವ್ಯವಹಾರ ರೂ.1029 ಕೋಟಿಯನ್ನು ಮೀರಿದೆ, ಇದನ್ನು 30.09.2023ಕ್ಕೆ ಹೋಲಿಸುವಾಗ ವ್ಯವಹಾರದಲ್ಲಿ ರೂ.128 ಕೋಟಿ ಹೆಚ್ಚಳವಾಗಿ, (ಠೇವಣಿ ರೂ.64 ಕೋಟಿ ಮತ್ತು ಸಾಲ ರೂ.64 ಕೋಟಿ) ಶೇ.14 ವೃದ್ಧಿಯಾಗಿರುತ್ತದೆ. ನಿವ್ವಳ ಲಾಭ ರೂ.4.61 ಕೋಟಿಯಾಗಿದ್ದು, Net NPA (ಅನುತ್ಪಾದಕ ಆಸ್ತಿ) ಶೂನ್ಯ ಪ್ರಮಾಣದಲ್ಲಿರುತ್ತದೆ ಎಂದು ತಿಳಿಸಲು ಸಂತೋಷ ಪಡುತ್ತೇವೆ.

### ಸಂಘವು ದಿನಾಂಕ 30.09.2024ಕ್ಕೆ ಸಾಧಿಸಿದ ಪ್ರಗತಿಯನ್ನು ದಿನಾಂಕ 30.09.2023ಕ್ಕೆ ಹೋಲಿಸಿ, ಪ್ರಗತಿಯ ಪಕ್ಷಿನೋಟ ಈ ಕೆಳಗಿನಂತಿದೆ.

| ಕ್ರ ಸಂ. | ಕಾರ್ಯ ವಿಭಾಗ | ಸಪ್ಟೆಂಬರ್ 2023ಕ್ಕೆ ಇದ್ದಂತೆ | ಸಪ್ಟೆಂಬರ್ 2024ಕ್ಕೆ ಇದ್ದಂತೆ | ಹೆಚ್ಚಳ (ರೂ) | ಶೇ. |
|---|---|---|---|---|---|
| 1 | ಠೇವಣಾತಿ | ರೂ.484 ಕೋಟಿ | ರೂ.548 ಕೋಟಿ | ರೂ.64 ಕೋಟಿ | 13% |
| 2 | ಸಾಲ ಮತ್ತು ಮುಂಗಡ | ರೂ.417 ಕೋಟಿ | ರೂ.481 ಕೋಟಿ | ರೂ.64 ಕೋಟಿ | 15% |
| 3 | ಒಟ್ಟು ವ್ಯವಹಾರ | ರೂ.901 ಕೋಟಿ | ರೂ.1029 ಕೋಟಿ | ರೂ.128 ಕೋಟಿ | 14% |
| 4 | ನಿವ್ವಳ ಲಾಭ | ರೂ.3.45 ಕೋಟಿ | ರೂ.4.61 ಕೋಟಿ | ರೂ.1.16 ಕೋಟಿ | 34% |
| 5 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | – | – |

1. ಸಂಘದ ಒಟ್ಟು ಠೇವಣಾತಿಯು ರೂ.548 ಕೋಟಿಯಷ್ಟಿದ್ದು, 2023ರ ಸಪ್ಟೆಂಬರ್‌ಗಿಂತ ರೂ.64 ಕೋಟಿ ಹೆಚ್ಚಳಗೊಂಡು, ಶೇ.13ರಷ್ಟು ವೃದ್ಧಿಗೊಂಡಿರುವುದು,
2. ಹೊರಬಾಕಿ ಸಾಲವು ರೂ.481 ಕೋಟಿಯಷ್ಟಿದ್ದು, 2023ರ ಸಪ್ಟೆಂಬರ್‌ಗಿಂತ ರೂ.64 ಕೋಟಿ ಹೆಚ್ಚಳಗೊಂಡು ಶೇ.15ರಷ್ಟು ವೃದ್ಧಿಗೊಂಡಿರುವುದು,
3. ಒಟ್ಟು ವ್ಯವಹಾರವು ರೂ.1029 ಕೋಟಿಯಷ್ಟಿದ್ದು, 2023ರ ಸಪ್ಟೆಂಬರ್‌ಗಿಂತ ರೂ.128 ಕೋಟಿ ಹೆಚ್ಚಳಗೊಂಡು, ಶೇ.14ರಷ್ಟು ವೃದ್ಧಿಯಾಗಿರುವುದು,
4. 30.09.2024ಕ್ಕೆ ಸಂಘವು ರೂ.4.61 ಕೋಟಿ ನಿವ್ವಳ ಲಾಭ ಗಳಿಸಿದ್ದು, 30.09.2023ಕ್ಕೆ ನಿವ್ವಳ ಲಾಭವು ರೂ.4.61 ಕೋಟಿಯಾಗಿ, ಈ ಅವಧಿಯಲ್ಲಿ ಲಾಭವು ರೂ.1.16 ಕೋಟಿ ಹೆಚ್ಚಳಗೊಂಡು, ಶೇ.34ರಷ್ಟು ವೃದ್ಧಿಯಾಗಿರುವುದು.

ಸಂಘದ ಮೇಲೆ ಸದಸ್ಯ ಠೇವಣಿದಾರರು ಇಟ್ಟಿರುವ ಅದಮ್ಯ ವಿಶ್ವಾಸ, ಸಾಲಗಾರ ಸದಸ್ಯರ ಸಹಕಾರ, ಸಂಘದ ಆಡಳಿತ ಮಂಡಳಿ ಸದಸ್ಯರ ಮಾರ್ಗದರ್ಶನ, ಎಲ್ಲಾ ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳ ಸಹಭಾಗಿತ್ವ, ಸಂಘದ ಶಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳ ಅಪಾರ ಶ್ರಮ, ಸಂಘದ ವ್ಯವಹಾರ ಅತ್ಯುತ್ತಮವಾಗಿ ವೃದ್ಧಿಯಾಲು ಕಾರಣವಾಗಿದೆ. ನಿಮಗೆಲ್ಲರಿಗೂ ನನ್ನ ವೈಯಕ್ತಿಕ ನೆಲೆಯಲ್ಲಿ ಹಾಗೂ ಸಂಘದ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತಿದ್ದೇನೆ.

ಮುಂದಿನ ದಿನಗಳಲ್ಲೂ ಕೂಡ ತಮ್ಮೆಲ್ಲರ ಇದೇ ರೀತಿಯ ಸಹಕಾರದೊಂದಿಗೆ, ಸಂಘವನ್ನು ಇನ್ನಷ್ಟು ಪ್ರಗತಿ ಮತ್ತು ಸದೃಢತೆಯತ್ತ ಮುನ್ನಡೆಸಲು ಸಾಧ್ಯವಾಗುವುದೆಂದು ಭರವಸೆಯನ್ನು ವ್ಯಕ್ತಪಡಿಸುತ್ತೇನೆ.

(ಕೆ. ಜೈರಾಜ್ ಬಿ. ರೈ)
ಅಧ್ಯಕ್ಷರು

## ರೂ.1000 ಕೋಟಿ ಮೀರಿದ ಒಟ್ಟು ವ್ಯವಹಾರ ಸಾಧಿಸಿದ<br>ಹಾಗೂ<br>2023-24ನೇ ಸಾಲಿನಲ್ಲಿ ಸರ್ವತೋಮುಖ ಪ್ರಗತಿ ಸಾಧಿಸಿದ ಅತ್ಯುತ್ತಮ ಕ್ರೆಡಿಟ್ ಸಹಕಾರಿ ಸಂಘ ಪ್ರಶಸ್ತಿ



ಸ್ಥಾಪನೆಯ 30ನೇ ವರ್ಷದಲ್ಲಿ, 30.6.2024ಕ್ಕೆ ರೂ.1002 ಕೋಟಿ ಒಟ್ಟು ವ್ಯವಹಾರವನ್ನು ದಾಖಲಿಸಿ (ಠೇವಣಾತಿ + ಸಾಲ/ಮುಂಗಡ) ಅವಿಭಜಿತ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಈ ಸಾಧನೆ ಮಾಡಿದ ಪ್ರಪ್ರಥಮ ಕ್ರೆಡಿಟ್ ಕೋ-ಓಪರೇಟಿವ್ ಸಂಘವಾಗಿ ಮೂಡಿ ಬಂದಿರುವ "ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ."ನ ಸಾಧನೆಯನ್ನು ಗುರುತಿಸಿ ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನವರು ತಮ್ಮ ದಿನಾಂಕ 14.08.2024ರಂದು ಜರಗಿದ ವಾರ್ಷಿಕ ಮಹಾಸಭೆಯಲ್ಲಿ 'ವಿಶೇಷ ಗೌರವ' ಪ್ರಶಸ್ತಿ ಹಾಗೂ 2023-24ನೇ ಸಾಲಿನಲ್ಲಿ ಸರ್ವತೋಮುಖ ವ್ಯವಹಾರಾಭಿವೃದ್ಧಿ ಹೊಂದಿದ ಅತ್ಯುತ್ತಮ ಕ್ರೆಡಿಟ್ ಸಹಕಾರಿ ಸಂಘ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಈ ಬಾರಿ ಸಂಘವು, ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನಿಂದ ಎರಡು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದೆ.

ಈ ಪ್ರಶಸ್ತಿಯನ್ನು ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನ ಮಹಾಸಭೆಯಲ್ಲಿ, ಬ್ಯಾಂಕಿನ ಅಧ್ಯಕ್ಷರಾದ ಡಾ। ಎಂ.ಎನ್. ರಾಜೇಂದ್ರ ಕುಮಾರ್‌ರವರು, ದ.ಕ. ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರಾದ ಹೆಚ್.ಎನ್.ರಮೇಶ್, ಉಡುಪಿ ಜಿಲ್ಲಾ ಸಹಕಾರಿ ಸಂಘಗಳ ಉಪನಿಬಂಧಕರಾದ ಶ್ರೀಮತಿ ಲಾವಣ್ಯ, ಬ್ಯಾಂಕಿನ ಸರ್ವ ನಿರ್ದೇಶಕರುಗಳು, ಸಂಘದ ನಿರ್ದೇಶಕರು ಹಾಗೂ ದ.ಕ. ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷರಾದ ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ ಮತ್ತು ಉಡುಪಿ ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷರಾದ ಜಯಕರ್ ಶೆಟ್ಟಿ ಇಂದ್ರಾಳಿರವರುಗಳ ಸಮಕ್ಷಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರಿಗೆ ಹಾಗೂ ಮಹಾಪ್ರಬಂಧಕ ಶ್ರೀ ಗಣೇಶ್ ಜಿ.ಕೆ.ಯವರಿಗೆ ಪ್ರದಾನ ಮಾಡಿದರು. ಸಂಘಕ್ಕೆ ಈ ಪ್ರಶಸ್ತಿಯು ಕಳೆದ 8 ವರ್ಷಗಳಿಂದ ಸತತವಾಗಿ ಹಾಗೂ ಒಟ್ಟು 13ನೇ ಬಾರಿಗೆ ಲಭಿಸಿರುತ್ತದೆ.

## ಸಂಘದ ಸದಸ್ಯರ ಹಾಗೂ ಸಿಬ್ಬಂದಿಗಳ ಪ್ರತಿಭಾನ್ವಿತ ಮಕ್ಕಳಿಗೆ ಸ್ಥಾಪಕಾಧ್ಯಕ್ಷ<br>ಕೆ. ಬಿ ಜಯಪಾಲ ಶೆಟ್ಟಿ ಪ್ರತಿಭಾ ಪುರಸ್ಕಾರ ಸಮಾರಂಭ





ಸಂಘದ 2023-24ನೇ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳನ್ನು ಗಳಿಸಿ ಅತ್ಯುನ್ನತ ಸಾಧನೆ ಮಾಡಿದ ಸಂಘದ ಸದಸ್ಯರ ಮತ್ತು ಸಿಬ್ಬಂದಿಗಳ ಮಕ್ಕಳಿಗೆ ಸ್ಥಾಪಕಾಧ್ಯಕ್ಷ ಕೆ. ಬಿ. ಜಯಪಾಲ ಶೆಟ್ಟಿ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭವು ದಿನಾಂಕ 01.09.2024ರಂದು ಮಂಗಳೂರಿನ ಉರ್ವ ಸೆಂಟನರಿ ಸಭಾಭವನದಲ್ಲಿ ಜರಗಿತು. ಕಾರ್ಯಕ್ರಮದ ಉದ್ಘಾಟಕರಾಗಿ ನಿಟ್ಟೆ ಡೀಮ್ಡ್ ಟು ಬಿ ಯೂನಿವರ್ಸಿಟಿಯ ಐ.ಎಸ್.ಆರ್ ಅಂಡ್ ಸಿ.ಆರ್.ಎಲ್‌ನ ಉಪಾಧ್ಯಕ್ಷರು ಹಾಗೂ ಮಾಜಿ ಉಪಕುಲಪತಿಗಳಾಗಿರುವ ಪ್ರೊ. ಡಾ। ಸತೀಶ್‌ಕುಮಾರ್ ಭಂಡಾರಿಯವರು ಪಾಲ್ಗೊಂಡಿದ್ದು ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ ರೈ, ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿ ಹಾಗೂ ನಿರ್ದೇಶಕರಾದ ಶ್ರೀ ವಿಠಲ ಪಿ. ಶೆಟ್ಟಿ, ಶ್ರೀ ಯಂ ರಾಮಯ ಶೆಟ್ಟಿ, ಶ್ರೀ ಅರುಣ್‌ಕುಮಾರ್ ಶೆಟ್ಟಿ, ಶ್ರೀ ಪಿ. ಬಿ. ದಿವಾಕರ ರೈ, ಶ್ರೀ ಕುಂಬ್ರ ದಯಾಕರ ಆಳ್ವ, ಶ್ರೀ ಪ್ರಸಾದ್ ಕೌಶಲ್ ಶೆಟ್ಟಿ ಮತ್ತು ಅರಿಯಡ್ಕ ಚಿಕ್ಕಪ್ಪ ನ್ಯಾಕ್, ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ.ರವರು ಮತ್ತು ಮಕ್ಕಳ ಹೆತ್ತವರಾದ ಸಂಘದ ಸದಸ್ಯರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸಂಘದ ಪುತ್ತೂರು ಮತ್ತು ಸುರತ್ಕಲ್ ಶಾಖೆಯ ನವೀಕೃತ ಕಛೇರಿ ಉದ್ಘಾಟನೆ



ಸಂಘದ ಪುತ್ತೂರು ಶಾಖೆಯ ನವೀಕೃತ ಹವಾನಿಯಂತ್ರಿತ ಶಾಖಾ ಕಛೇರಿಯನ್ನು ಪುತ್ತೂರು ನಗರಸಭಾ ಪೌರಾಯುಕ್ತ ಶ್ರೀ ಮಧು ಎಸ್. ಮನೋಹರ್‌ರವರು ದಿನಾಂಕ 11.09.2024ರಂದು ಉದ್ಘಾಟಿಸಿದ ಸಂದರ್ಭ



ಸಂಘದ ಸುರತ್ಕಲ್ ಶಾಖೆಯ ನವೀಕೃತ ಹವಾನಿಯಂತ್ರಿತ ಶಾಖಾ ಕಛೇರಿಯನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ದಿನಾಂಕ 12.09.2024ರಂದು ಉದ್ಘಾಟಿಸಿದ ಸಂದರ್ಭ

## ಸಂಘದ 30ನೇ ವಾರ್ಷಿಕ ಮಹಾಸಭೆ : 2023-24ನೇ ಸಾಲಿಗೆ ರೂ.12.01 ಕೋಟಿ ಲಾಭ ಹಾಗೂ ಶೇ.25 ಡಿವಿಡೆಂಡ್ ಘೋಷಣೆ

ಸಂಘದ 30ನೇ ವಾರ್ಷಿಕ ಮಹಾಸಭೆ, ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಉರ್ವ ಸೆಂಟನರಿ ಚರ್ಚ್ ಹಾಲ್‌ನಲ್ಲಿ ದಿನಾಂಕ 01.09.2024 ರಂದು ಜರಗಿತು.

ಸಂಘವು 31.03.2024ಕ್ಕೆ ಅಂತ್ಯವಾದ, 2023-24ನೇ ಸಾಲಿನಲ್ಲಿ ರೂ.12.01 ಕೋಟಿ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.25 ಡಿವಿಡೆಂಡ್‌ನ್ನು ನೀಡಲು ಮಹಾಸಭೆಯಲ್ಲಿ ನಿರ್ಧರಿಸಲಾಯಿತು.




## ಸಂಘದ ವತಿಯಿಂದ ವನಮಹೋತ್ಸವ ಕಾರ್ಯಕ್ರಮ





ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಮತ್ತು ಬಂಟರ ಯಾನೆ ನಾಡವರ ಮಾತೃ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಕೆ.ಎಂ. ಶೆಟ್ಟಿಯವರು ದಿನಾಂಕ 27.07.2024ರಂದು ಸಂಘದ ವತಿಯಿಂದ ಸಸಿ ನೆಡುವ ಮೂಲಕ ವನಮಹೋತ್ಸವ ಕಾರ್ಯಕ್ರಮವನ್ನು ಆಚರಿಸಿದರು. ಸಂಘದ ನಿತ್ಯನಿಧಿ ಸಂಗ್ರಾಹಕರು ಹಾಗೂ ವೃಕ್ಷಮಿತ್ರ ಶ್ರೀ ಮಾಧವ ಉಳ್ಳಾಲ್‌ರವರು ಈ ಕಾರ್ಯಕ್ರಮಕ್ಕೆ ಸ್ವಾಗತಿಸಿದರು. ಈ ಕಾರ್ಯಕ್ರಮದಲ್ಲಿ ಸಂಘದ ಮಹಾಪ್ರಬಂಧಕರು, ಸಹಾಯಕ ಮಹಾಪ್ರಬಂಧಕರು, ಮಂಗಳೂರು ಶಾಖೆಯ ಶಾಖಾಧಿಕಾರಿ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸಹಕಾರಿ ಶಿಕ್ಷಣ ನಿಧಿಯ ಚೆಕ್ ಹಸ್ತಾಂತರ

2023–24ನೇ ಸಾಲಿನ ನಿವ್ವಳ ಲಾಭದಲ್ಲಿ ಸಹಕಾರಿ ಶಿಕ್ಷಣ ನಿಧಿಗೆ ತೆಗೆದಿರಿಸಲಾದ ರೂ.18,01,434/– (ರೂಪಾಯಿ ಹದಿನೆಂಟು ಲಕ್ಷದ ಒಂದು ಸಾವಿರದ ನಾಲ್ಕು ನೂರ ಮೂವತ್ತ ನಾಲ್ಕು ಮಾತ್ರ) ವನ್ನು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೆಂಗಳೂರು ಇವರಿಗೆ ಪಾವತಿಸುವರೇ, ಚೆಕ್ಕನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು, ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್‌ನ ಅಧ್ಯಕ್ಷರಾದ ಶ್ರೀ ಬೆಳ್ಳಿಪ್ಪಾಡಿ ಪ್ರಸಾದ್ ಕೌಶಲ್ ಶೆಟ್ಟಿಯವರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸಂಘದ ಆಡಳಿತ ಮಂಡಳಿ ನಿರ್ದೇಶಕರು ಮತ್ತು ಮಹಾಪ್ರಬಂಧಕರು ಉಪಸ್ಥಿತರಿದ್ದರು.



## ಹುಟ್ಟು ಹಬ್ಬದ ಶುಭಾಶಯಗಳು

**ಅಕ್ಟೋಬರ್ 2024 ರಿಂದ ಡಿಸೆಂಬರ್ 2024ರ ಅವಧಿಯಲ್ಲಿ ಜನ್ಮದಿನವನ್ನು ಆಚರಿಸುವ ತಮಗೆಲ್ಲರಿಗೂ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು**

| ಸಿಬ್ಬಂದಿಗಳ ಹೆಸರು | ಶಾಖೆ | ಸಿಬ್ಬಂದಿಗಳ ಹೆಸರು | ಶಾಖೆ |
|---|---|---|---|
| ಶ್ರೀಮತಿ ಯಶೋಧ ನ್ಯಾಕ್ | ಮುಲ್ಕಿ | ಶ್ರೀ ಕೃಷ್ಣ ಪ್ರಸಾದ್ | ವೆಲೆನ್ಸಿಯಾ |
| ಶ್ರೀಮತಿ ಸೌಮ್ಯರಾಣಿ | ಮುಡಿಪು | ಕು। ಪ್ರತೀಕ್ಷಾ ಸಿ. ಶೆಟ್ಟಿ | ಕಾರ್ಕಳ |
| ಶ್ರೀ ರಕ್ಷಿತ್ ಆರ್. ಶೆಟ್ಟಿ | ವೆಲೆನ್ಸೀಯಾ | ಶ್ರೀ ಸಂತೋಷ್ ಕುಮಾರ್ | ಹೆಬ್ರಿ |
| ಕು. ಪೂರ್ಣಿಮಾ | ಹೆಬ್ರಿ | ಶ್ರೀಮತಿ ಸವಿತಾಎಸ್ | ಚಿಲಿಂಬಿ |
| ಶ್ರೀಮತಿ ಕಾವ್ಯಶ್ರೀ ಬಿ. | ಕಡಬ | ಶ್ರೀಮತಿ ನಂದಿತಾ ಆಚಾರ್ಯ | ಹಂಪನಕಟ್ಟೆ |
| ಶ್ರೀ ಧನಂಜಯ ಕುಮಾರ್ | ಮುಲ್ಕಿ | ಶ್ರೀ ರಂಜಿತ್ ಶೆಟ್ಟಿ | ಕಾರ್ಕಳ |
| ಕು। ರೇವತಿ | ಬೆಳ್ತಂಗಡಿ | ಶ್ರೀ ಶಮಂತ್ ಟಿ. ರೈ | ಕೇಂದ್ರ ಕಛೇರಿ |
| ಶ್ರೀ ಅಣ್ಣಪ್ಪ ಶೆಟ್ಟಿ | ಉಡುಪಿ | ಕು. ಸುಶ್ಮಿತ | ಉಡುಪಿ |
| ಶ್ರೀ ಮೋಹನ್ ಎಂ. | ಮಂಗಳೂರು | ಶ್ರೀ ಬಾಲಕೃಷ್ಣ ನಾಯಕ್ | ಪುತ್ತೂರು |

## ಶ್ರದ್ಧಾಂಜಲಿ

**ಸಂಘದ ಹಿರಿಯ ಸದಸ್ಯರಾದ ಶ್ರೀಮತಿ ಸುಖಲತಾ ಆರ್. ಶೆಟ್ಟಿ** (ಸಂಘದ ನಿರ್ದೇಶಕರಾದ ಸಿಎ ಎಚ್.ಆರ್. ಶೆಟ್ಟಿಯವರ ಸಹಧರ್ಮಿಣಿ). ಅಗಲಿದ ದಿವ್ಯ ಚೇತನಕ್ಕೆ ಚಿರಶಾಂತಿ ಕೋರಿಕೊಂಡು, ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.

## ಅಭಿನಂದನೆಗಳು

ಸಂಘದ ಕಡಬ ಶಾಖೆಯ ಸಿಬ್ಬಂದಿ **ಚಿ। ಸೌ। ಅಶ್ವಿತ ಎಂ.ರವರ ವಿವಾಹವು ಚಿ। ಅಖಿಲ್ ಎ.** ರವರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ–ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.

Private Circulation only

**BOOK POST**

To ..........................................................................

..........................................................................

..........................................................................

If not delivered please return to **SRI RAMAKRISHNA CREDIT CO-OPERATIVE SOCIETY LTD.,**
2nd Floor, Amruthothsav Building, Bunts Hostel Circle, Mangalore – 575 003.